# 15

# ಕ್ರಿಸ್ತನ ಉದಾಹರಣೆಯನ್ನು ಅನುಸರಿಸುವ ಮೂಲಕ ಪ್ರೀತಿಯಲ್ಲಿ ನಡೆಯುವದು

# (5:1-6)

"ನಡೆಯುವದು" ಎಂಬುದು ಅಧ್ಯಾಯ 5ರಲ್ಲಿ ತಿರುಗಿ ಬಳಕೆಯಾಗಿದೆ. ಕ್ರಿಸ್ತನನ್ನು ಉದಾಹರಣೆಯಾಗಿ ಬಳಸುವ ಮೂಲಕ, ಪೌಲನು ಎಫೆಸದಲ್ಲಿರುವ ಕ್ರೈಸ್ತರಿಗೆ "ಪ್ರೀತಿಯಲ್ಲಿ ನಡೆಯಿರಿ" ಎಂದು ಮತ್ತು ಕ್ರಿಸ್ತನ ರಾಜ್ಯದ ಮತ್ತು ದೇವರ ಬಾಧ್ಯಸ್ತರಾದ ದೇವ ಜನರ ಮಾರ್ಗಕ್ಕೆ ಸರಿಯಾಗಿ ಜೀವಿಸುವಂತೆ ಒತ್ತಾಯಿಸುತ್ತಿದ್ದಾನೆ.

## ದೇವರ ಮತ್ತು ಕ್ರಿಸ್ತನ ಪ್ರೀತಿಯನ್ನು ಅನುಕರಿಸುವದು (5:1, 2)

**1ಆದುದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ. 2ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿಯೂ ಯಜ್ಞವಾಗಿಯೂ ಸಮರ್ಪಿಸಿಕೊಂಡ ಪ್ರಕಾರ ನೀವೂ ಪ್ರೀತಿಯಲ್ಲಿ ನಡೆದುಕೊಳ್ಳಿರಿ.**

**ವಚನಗಳು 1, 2.** "ನಡೆ" ಎಂಬುದಕ್ಕಿರುವ ಸೂಚನೆಗಳು ಒಂದು ನಿಶ್ಚಿತ ರೀತಿಯಲ್ಲಿ ಎಫೆಸದಲ್ಲಿ ಪೌಲನ ಅನ್ವಯದ ಭಾಗವನ್ನು ಸರಿದೂಗಿಸುವವು ಆಗಿವೆ (ಅಧ್ಯಾಯ 4-6). 5:1ರಲ್ಲಿನ **ಆದುದರಿಂದ** ಎಂಬುದು ಈ ಎಚ್ಚರಿಕೆಯು ಪೌಲನು ಈಗ ತಾನೇ ಬರೆದಿರುವದಕ್ಕೆ ಸಂಬಂಧಿಸಿದ್ದು ಎಂದು ತೋರಿಸುವುದಾಗಿದೆ. ಅಧ್ಯಾಯ 4ರ ನೂತನವಾದ ಮನಸ್ಸು ಮತ್ತು ನೂತನ ಸ್ವಭಾವ ದೇವರಿಂದ ಅನುಕರಿಯತವಾದವುಗಳನ್ನು ಪ್ರಾಯೋಗಿಸುವವು ಆಗಿವೆ.

**ಅನುಸರಿಸುವ** ಇದು "ಅನುಕರಣದಲ್ಲಿ ನಿಪುಣ" *mimētai* ಎಂಬುದರಿಂದ ನಾವು ಪದವನ್ನು ಪಡೆಯುವಂಥ ಭಾಷಾಂತರವಾಗಿದೆ. **ಪ್ರೀತಿಯಲ್ಲಿ** ನಡೆಯವರಾದ ನಾವು ಕ್ರೈಸ್ತರು "mimic" **ದೇವರ** "ಅನುಕರಿಸುವವರು" ಆಗಿದ್ದೇವೆ. "ದೇವರ ಅನುಸರಿಸುವವರು" ಎಂಬ ವಿಷಯವು ಹಳೆಯ ಒಡಂಬಡಿಕೆಯ ವಿಚಾರವಾಗಿದೆ ಹಾಗಿದ್ದಾಗ್ಯೂ ಭಾಷೆಯ ನಿಯವಾದ ಅನುಕರಣೆಯು ಅಲ್ಲಿ ಕಂಡುಬರುವದಿಲ್ಲ. "ನಿಮ್ಮ ದೇವರಾದ ಯೆಹೋವನೆಂಬ ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು" ಎಂದು ಹಳೆಯ ಒಡಂಬಡಿಕೆಯ ದೇವರ ಜನರಿಗೆ ಹೇಳಲ್ಪಟ್ಟಿತು (ಯಾಜಕಕಾಂಡ 19:2). ಇದು ದೇವರನ್ನು ಅನುಸರಿಸುವದಕ್ಕೆ ಇರುವ ಆಜ್ಞೆಯಾಗಿದೆ. ಹೊಸ ಒಡಂಬಡಿಕೆಯಲ್ಲಿ ಯೇಸು, "ನಿಮ್ಮ ತಂದೆ ಕರುಣೆಯುಳ್ಳವನಾಗಿರುವ ಪ್ರಕಾರವೇ ನೀವೂ ಕರುಣೆಯುಳ್ಳವರಾಗಿರಿ" ಎಂದು ಹೇಳಿದ್ದಾನೆ (ಲೂಕ 6:36). ಅದಲ್ಲದೆ "ಆದುದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ಸಹ ದೋಷವಿಲ್ಲದವರಾಗಿರ್ರಿ" ಎಂದೂ ಸಹ ಯೇಸು ಕಲಿಸಿದ್ದಾನೆ (ಮತ್ತಾಯ 5:48). ಕ್ರೈಸ್ತರು ದೇವರ **ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ** ಇದ್ದು, ಆತನ ಹಾಗೆ ಬೆಳೆಯಬೇಕು. ಕ್ರೈಸ್ತರು ದೇವರ ಕುಟುಂಬವಾಗಿ ತೆಗೆದುಕೊಳ್ಳಲ್ಪಟ್ಟವರಾಗಿದ್ದಾರೆ ಎಂದು ಪೌಲನು ಈ ಪತ್ರದಲ್ಲಿ ಈ ಹಿಂದೆ ವರ್ಣಿಸಿದ್ದಾನೆ (ನೋಡಿರಿ 1:5).

5:1ರಲ್ಲಿ, ನಮ್ಮ ಪ್ರೀತಿಯುಳ್ಳ ತಂದೆಯಂತೆ ಆಗುವುದರಿಂದ ಕುಟುಂಬವನ್ನು ನಮ್ಮ ಮೇಲೆ ತೆಗೆದುಕೊಳ್ಳಬೇಕು ಎಂದು ಆತನು ಹೇಳಿದ್ದಾನೆ. ಜನರಿಗೆ ಸಂಬಂಧಿಸಿದಂತಹ ದೇವರ ಕಾರ್ಯಗಳು ಜನರಿಗೆ ಸಂಬಂಧಿಸಿದ ಆತನ ಮಕ್ಕಳ ಮೂಲಕ ಯೋಗ್ಯವಾಗುವವು ಆಗಿವೆ.

ದೇವರ ಹಾಗೆ ನೀತಿವಂತರು ಮತ್ತು ಪರಿಶುದ್ಧರೂ ಆಗಿರುವದು ನೂತ ಸ್ವಭಾವದ ಮೇಲೆ ಇಡುವ ಮೂಲಕ ಎಂದು 4:24ರಲ್ಲಿ, ಪೌಲನು ಕ್ರೈಸ್ತರಿಗೆ ತೋರಿಸುವವನು ಆಗಿದ್ದಾನೆ. 4:32ರಲ್ಲಿ, ಕ್ಷಮಿಸುವವರಾಗಿಯೂ ಮತ್ತು ಕರುಣೆಯುಳ್ಳವರಾಗಿಯೂ ಇರುವುದನ್ನು ತೋರಿಸುವದರಲ್ಲಿ ಕೂಡ ನಾವು ದೇವರ ಹಾಗೆ ಇರುವವರು ಎಂದು ಆತನು ತೋರಿಸುತ್ತಾನೆ. "ಪ್ರೀತಿಯಲ್ಲಿ ನಡೆಯುವದು" ಎಂಬ ರೀತಿಯು (5:2) "ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟ" (ಯೋಹಾನ 3:16) ಮತ್ತು "ತನ್ನನ್ನೇ ನಮಗಾಗಿ ಕೊಟ್ಟ" (5:2) ದೇವರಾಗಿದೆ. ಇದು ದೇವರಿಂದ ಕ್ರಿಸ್ತನಿಗೆ ವರ್ಗಾಯಿಸಲ್ಪಟ್ಟಿದ್ದು ಕ್ರಿಸ್ತನನ್ನು ಕೊಡುವ ಮೂಲಕ, ಕ್ರಿಸ್ತನು ನಮ್ಮನ್ನು ನಮ್ಮ ಪ್ರೀತಿಸಿ ಮತ್ತು ತನ್ನನ್ನೇ ನಮಗೋಸ್ಕರ ಕೊಟ್ಟಿ ಬಿಟ್ಟ ದೇವರು ಅವತರಿಸಿದ ವಾಸ್ತವವನ್ನು ವಚನ 1 ಮತ್ತು 2ರಲ್ಲಿ ಸರಳವಾಗಿ ಒತ್ತಿ ಹೇಳಿದ್ದಾನೆ.

**ಕ್ರಿಸ್ತನು ... ತನ್ನನ್ನೇ ... ಸಮರ್ಪಿಸಿಕೊಂಡ ಪ್ರಕಾರ** ಎಂಬುದು ದೇವರ ಪ್ರೀತಿ ಮತ್ತು ಆ ಪ್ರೀತಿ ನಮಗೆ ಹೇಗೆ ತೋರಿಸಲ್ಪಡುವದು ಎಂದು ವರ್ಣಿಸುವಲ್ಲಿ ಪೌಲನನ್ನು ಕ್ರಿಸ್ತನು ನಡೆಸಿದ್ದು ಅನುಸರಿಸುವಿಕೆಯ ಸೂಚನೆಯಾಗಿದೆ. "ತನ್ನನ್ನೇ ... ಸಮರ್ಪಿಸಿಕೊಂಡನು,"[1] ಎಂಬದು "ತನನ್ನನ್ನು ತಾನು ಮರಣಕ್ಕೆ ಒಪ್ಪಿಸಿಕೊಳ್ಳುವದು" ಮತ್ತು "ನಮಗೋಸ್ಕರ" ಎಂಬುದು "ನಮ್ಮ ಕಾರಣಕ್ಕಾಗಿ" ಅಥವಾ "ನಮ್ಮ ಪ್ರಯೋಜನಕ್ಕಾಗಿ" ಆತನ ರಕ್ಷಣೆಯ ವರವನ್ನು ಸ್ವೀಕರಿಸಿದ ಎಲ್ಲರಿಗೋಸ್ಕರ ಎಂದು ಸೂಚಿಸುವುದಾಗಿದೆ.[2] ಆ ವಿಚಾರವನ್ನು ಪೌಲನು ಹಲವು ಬಾರಿ ತನ್ನ ಪತ್ರದಲ್ಲಿ ಮಂಡಿಸಿದ್ದಾನೆ (ರೋಮಾಪುರ 4:25; 8:32; ಗಲಾತ್ಯ 2:20; ಎಫೆಸ 5:25).

**ಕಾಣಿಕೆಯಾಗಿಯೂ ಯಜ್ಞವಾಗಿಯೂ** ಎಂಬ ಪದವು ಕ್ರಿಸ್ತನ ಮರಣದ ಉದ್ದೇಶವನ್ನು ವ್ಯಾಖ್ಯಾನಿಸುವುದಾಗಿದೆ. ಆತನು ಹಳೆ ಒಡಂಬಡಿಕೆಯ **ಕಾಣಿಕೆಯಾಗಿಯೂ ಯಜ್ಞವಾಗಿಯೂ** ಇರುವುದನ್ನು ಸಂಪೂರ್ಣಗೊಳಿಸುವುದಕ್ಕೋಸ್ಕರ ಮರಣಿಸಿದನು ಮತ್ತು ತನ್ನ ರಕ್ತವನ್ನು ಚೆಲ್ಲುವ ಮೂಲಕ ಆತನು ಪಾಪಕ್ಕೆ ಕ್ಷಮಾಪಣೆಯನ್ನು ಮತ್ತು ಸಂತೃಪ್ತಿಯನ್ನು ತಂದನು (ನೋಡಿರಿ ಇಬ್ರಿಯ 10:14-18; 1 ಯೋಹಾನ 2:2; 4:10). ಮುಂದೆ, ಪಾಪವು ಮಾನವ ಮತ್ತು ದೇವರ ಸಂಬಂಧವನ್ನು ಹಾಳುಮಾಡಿದಾಗ, ಕ್ರಿಸ್ತನ ಮರಣವು ಮರುಸಂಧಾನವನ್ನು ತರುವುದಾಯಿತು (ನೋಡಿರಿ ರೋಮಾಪುರ 5:11; 2 ಕೊರಿಂಥ 5:18, 19). ಕ್ರಿಸ್ತನ ಕಾಣಿಕೆ ಮತ್ತು ಯಜ್ಞವು **ಸುಗಂಧವಾಸನೆಯಾದದ್ದನ್ನು** ಪೌಲನು ಚಿತ್ರಿಸುವಾಗ, ಬಹುಶ ಆತನು ಹಳೆಯ ಒಡಂಬಡಿಕೆಯಲ್ಲಿನ ದೇವರಿಗೆ ಅಲ್ಹಾದಕರ ಸುವಾಸನೆಯಾದಂತೆ ಇರುವ ಯಜ್ಞಗಳ ಹೇಳಿಕೆಗಳನ್ನು ಆತನು ಪ್ರತಿಬಿಂಬಿಸುತ್ತಿರಬಹುದು (ನೋಡಿರಿ ಆದಿಕಾಂಡ 8:21; ಯಾಜಕಕಾಂಡ 1:9, 13, 17). ಕ್ರಿಸ್ತನ ಯಜ್ಞವು ದೇವರಿಗೆ ಮೆಚ್ಚಿಕೆಯಾಗಿತ್ತು ಎಂಬುದು ಆತನ ಹೇಳಿಕೆಯಾಗಿದೆ. ಇದಕ್ಕೆ ಸಮಾನವಾದ ಭಾಷೆಯನ್ನು ಪೌಲನು ಫಿಲಿಪ್ಪಿ 4:18ರಲ್ಲಿ ಆತನಿಗೋಸ್ಕರ ಸಹೋದರರು ಮಾಡಿದ ಆರ್ಥಿಕ ಯಜ್ಞವನ್ನು ಸೂಚಿಸುವಾಗ ಬಳಸಿದ್ದಾನೆ.

ಎಫೆಸದವರು ಇತರರಿಗೆ ಪ್ರೀತಿಯನ್ನು ವ್ಯಕ್ತಪಡಿಸುವಲ್ಲಿ ದೇವರನ್ನು ಮತ್ತು ಕ್ರಿಸ್ತನನ್ನು ಅನುಸರಿಸುವವರಾಗಿದ್ದರು. "ನಿಶ್ಚಿತವಾಗಿ ಯಜ್ಞವು ಇತರರ ಯೋಗಕ್ಷೇಮಕ್ಕಾಗಿನ ಕಾಳಜೀಪೂರಕವಾದ ಒಬ್ಬನ ಸ್ವಂತ ಇಚ್ಛೆಯು ಸಮುದಾಯದಲ್ಲಿನ ಎಲ್ಲದರ ಮೇಲಿನ ಸಾಮರಸ್ಯದ ಗುಣವಾಗಿದೆ."[3] ಪೌಲನು ಮಾತನಾಡುವಂಥ ಪ್ರೀತಿಯು ಒಂದು ನಿರ್ಧಾರ

ವಾಗಿದೆ; ಇದು ಕೇವಲ ಭಾವನೆಯಲ್ಲ, ಆದರೆ ಒಬ್ಬನು ಮಾಡುವ ಆಯ್ಕೆಯಾಗಿದೆ. ಇದಕ್ಕೆ ಜೊತೆಯಾಗಿ, ಈ ಪ್ರೀತಿಯು ಕ್ರಿಯಾಶೀಲವಾದದ್ದು ಆಗಿರುತ್ತದೆ. ಇದು ಮಾಡಲ್ಪಟ್ಟ ವ್ಯವಹಾರಗಳಲ್ಲಿ ವ್ಯಕ್ತವಾದದ್ದು ಆಗಿರುತ್ತದೆ ಹೊರತು, ಕೇವಲ ಮಾತನಾಡಲ್ಪಟ್ಟ ಮಾತುಗಳು ವಾಗಿರುವದಿಲ್ಲ. ಅಂತಿಮವಾಗಿ, ಇಂಥ ಪ್ರೀತಿಯು ಶರತ್ತು ರಹಿತವಾದದ್ದು ಆಗಿರುತ್ತದೆ. ಇದು ಪ್ರೀತಿಸಲ್ಪಟ್ಟವನು ಏನು ಮಾಡುತ್ತಾನೆ ಅಥವಾ ಏನು ಮಾಡುವದಿಲ್ಲ ಎಂಬುದನ್ನು ತೀರ್ಮಾನಿಸುವುದರ ಮೂಲಕ ಇರುವದಿಲ್ಲ, ಆದರೆ ಪ್ರೀತಿಸುವವನ ಹೃದಯದ ಮೂಲಕ ಇರುವುದಾಗಿದೆ. ಕ್ರಿಸ್ತನಲ್ಲಿಯ ದೇವರ ಪ್ರೀತಿಯು, ಪ್ರೀತಿಯ ಆಯ್ಕೆಯಾದಂಥದ್ದು, ಮತ್ತು ಆ ಪ್ರೀತಿಯು ಶರತ್ತುರಹಿತವಾದಂಥದ್ದು - ಆಗಿದ್ದು ಇದು ಕ್ರೈಸ್ತನೊಬ್ಬನು ಅನುಸರಿಸುವಂಥ ಪ್ರೀತಿಯು ಇದಾಗಿರುತ್ತದೆ.

## ವಿಧೇಯತೆಯ ಜೀವನ ಶೈಲಿಯಲ್ಲಿ ಇರುವದು (5:3-6)

**3ಜಾರತ್ವ ಯಾವ ವಿಧವಾದ ಬಂಡುತನ ದ್ರವ್ಯಾಶೆ ಇವುಗಳ ಸುದ್ದಿಯಾದರೂ ನಿಮ್ಮಲ್ಲಿ ಇರಬಾರದು; ಇವುಗಳಿಗೆ ದೂರವಾಗಿರುವದೇ ದೇವಜನರಿಗೆ ಯೋಗ್ಯವಾದದ್ದು. 4ಹೊಲಸು ಮಾತು ಹುಚ್ಚು ಮಾತು ಕುಚೋದ್ಯ ಮಾತು ಇವು ಬೇಡ, ಆಯುಕ್ತವಾಗಿವೆ; ಇವುಗಳನ್ನು ಬಿಟ್ಟು ದೇವರಿಗೆ ಉಪಕಾರಸ್ತುತಿಮಾಡುವದು ಉತ್ತಮ. 5ಜಾರರು ದುರಾಚಾರಿಗಳು ವಿಗ್ರಹಾರಾಧಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ. 6ಹುರುಳಿಲ್ಲದ ಮಾತುಗಳನ್ನಾಡುವವರಿಗೆ ಕಿವಿಗೊಟ್ಟು ಮೋಸಹೋಗಬೇಡಿರಿ; ಅಂಥ ಕೃತ್ಯಗಳ ನಿಮಿತ್ತದಿಂದ ದೇವರ ಕೋಪವು ಆತನಿಗೆ ಅವಿಧೇಯರಾಗಿರುವವರ ಮೇಲೆ ಬರುತ್ತದೆ.**

5:1, 2ರಲ್ಲಿ ತಾನು ಪರಿಚಯಿಸಿದ ಪ್ರೀತಿಯ ತತ್ವದ ಅನ್ವಯವನ್ನು 5:3-6ರಲ್ಲಿ ಪೌಲನು ಮಂಡಿಸುತ್ತಿದ್ದಾನೆ. ಒಬ್ಬನ ಪ್ರೀತಿಯು ದೇವರ ಪ್ರೀತಿಯಂತ ಮತ್ತು ಕ್ರಿಸ್ತನ ಪ್ರೀತಿಯಂತೆ ಇರುವುದಾದರೆ, ಆತನು ಪಾಪಮಯ ವಿಚಾರಗಳಿಂದ ಮತ್ತು ವ್ಯವಹಾರಗಳಿಂದ ದೂರವಾ ಗಿರುವದು. ದೇವರನ್ನು ಮತ್ತು ಕ್ರಿಸ್ತನನ್ನು ಅನುಸರಿಸುವ ಒಬ್ಬ ವ್ಯಕ್ತಿಯು ಲೈಂಗಿಕವಾದ ದುರಾಚಾರ ಆಶೆ ಮತ್ತು ಕಾರ್ಯಗಳನ್ನು ಅಲಕ್ಷಿಸುವದು ಆಗಿದ್ದು, ಹೊಲಸು ಮಾತುಗಳಿಂದ ದೂರವಾಗಿರುವರು, ಅಸಬ್ಯತೆ, ದೇವರಿಗೆ ವಿರೋಧವಾದ ಮಾತು, ಮತ್ತು ಕೆಟ್ಟಮಾತುಗಳು ಇವೆಲ್ಲವುಗಳು ಈ ದುರಾಚಾರದ ಜೊತೆ ಸಾಗುವವು ಆಗಿವೆ.

**ವಚನ 3.** ಮೊದಲು, ಪೌಲನು **ಜಾರತ್ವವನ್ನು** ಸ್ಪಷ್ಟಪಡಿಸುತ್ತಾನೆ. ಇದಕ್ಕಾಗಿನ ಗ್ರೀಕ್ ಪದವು *porneia,* ಆಗಿದ್ದು "ವಿಶಾಲಾರ್ಥದಲ್ಲಿ, ಸಾಮಾನ್ಯವಾದ ಲೈಂಗಿಕ ಅನೈತಿಕತೆಯನ್ನು ಸೂಚಿಸುವಂತದ್ದಾಗಿದೆ ಆದರೆ ವಿಶೇಷವಾಗಿ ವ್ಯಭಿಚಾರ ಮತ್ತು ವ್ಯಭಿಚಾರಿಣಿಯೊಂದಿಗೆ ಲೈಂಗಿಕ ಸಂಪರ್ಕವನ್ನು ಸೂಚಿಸುವುದಾಗಿದೆ.[4] ಇದು "ಲೈಂಗಿಕ ವೃತ್ತಿ" ಎಂದು KJVಯಲ್ಲಿ ಭಾಷಾಂತರಗೊಂಡಿದೆ ಮತ್ತು NASBಯಲ್ಲಿನ ಬಳಿಕೆಗಳು ಯೋಹಾನ 8:41 ಮತ್ತು ಅಪೊಸ್ತರ ಕೃತ್ಯಗಳು 15:20, 29; 21:25ರಿಂದ ಎರವಲು ಪಡೆದವುಗಳು ಆಗಿವೆ.

"ವ್ಯಭಿಚಾರವು" (*moicheia*) ಮತ್ತೊಬ್ಬನ ಹೆಂಡತಿಯೊಂದಿಗೆ ಅನೈತಿಕವಾಗಿ ಲೈಂಗಿಕ ಸಂಪರ್ಕ ಹೊಂದುವದು ಎಂದು ಮಾತನಾಡುವದಕ್ಕೆ ಬಳಸಲ್ಪಡುವಾಗ, "ಲೈಂಗಿಕ ವೃತ್ತಿಯು" ಅನೈತಿಕವಾದ ಲೈಂಗಿಕ ಸಂಬಂಧವನ್ನು ಒಳಗೊಂಡಿದ್ದು, ಹಾದರ, ಸಲಿಂಗಕಾಮಿಗಳು ಮತ್ತು ವ್ಯಭಿಚಾರದಂಥವು ಆಗಿವೆ. ಯೂದ 7 ಸೋದೋಮೆ ಮತ್ತು ಗೋಮೋರಗಳ ಬಗ್ಗೆ ಮಾತನಾಡುವಂಥದ್ದಾಗಿದ್ದು (ನೋಡಿರಿ ಆದಿಕಾಂಡ 19:1-11) ಅಂಥ ಪಟ್ಟಣಗಳ ನಿವಾಸಿಗಳು ತಮ್ಮನ್ನು ತಾವು "ಹೇಯವಾದ ಅನೈತಿಕತೆಯಲ್ಲಿ" ತೋರ್ಪಡಿಸಿ ಕೊಂಡರು. ಯೂದನು ಆ ಪಟ್ಟಣದ ಪಾಪಗಳನ್ನು ವರ್ಣಿಸಲು *ekporneuō* ಎಂಬ ಗ್ರೀಕ್

ಪದವನ್ನು ಬಳಸಿದ್ದಾನೆ. ಅದಲ್ಲದೇ, ಸೋದೋಮಿನ ಜನರು ಕರ್ತನ ದೂತರಾದಂಥ ಆ ಇಬ್ಬರೊಡನೆ ತಮಗೆ ಸಂಗಮವಾಗಬೇಕೆಂದು ಬಯಸಿದರು ಎಂಬುದನ್ನು ಆದಿಕಾಂಡ 19 ಸೂಚಿಸುವುದಾಗಿದೆ. ಪರಿಶೀಲನೆಯಲ್ಲಿ ಈ ಪದಗಳ ಸತ್ಯವೇದಿಯ ಬಳಕೆಯನ್ನು ಪರಿಶೀಲಿಸಿದ ನಂತರ, "ವ್ಯಭಿಚಾರಕ್ಕೆ" ಯೋಚಿಸುವದು ಒಬ್ಬನು ಅಥವಾ ಇಬ್ಬರೂ ಯವರನ್ನು ಮದುವೆಯಾಗಿರುವವರ ಮಧ್ಯ ನಡೆಯುವದು ಮತ್ತು "ಲೈಂಗಿಕ ವೃತ್ತಿಯು" ಎಲ್ಲ ವಿಧವಾದ ಲೈಂಗಿಕ ಪಾಪಗಳನ್ನು ಒಳಗೊಂಡಿದ್ದು (ಅದರ ಅನಿಯಮಿತವಾದಂಥದ್ದಾದ) ವ್ಯಭಿಚಾರವನ್ನು ಒಳಗೊಂಡಿದ್ದು ಲೈಂಗಿಕವಾದ ಪಾಪ ಎಂಬುದಕ್ಕೆ ಇದು ಯೋಗ್ಯವಾಗಿ ಕಂಡಿತು. "ವ್ಯಭಿಚಾರ" ಮತ್ತು "ಲೈಂಗಿಕವೃತ್ತಿ" ಇವುಗಳು ಒಂದೇ ಪರಿಚ್ಛೇದದಲ್ಲಿ ಒಟ್ಟಾಗಿ ಕೆಲಸಾರಿ ಸೂಚಿಸಲ್ಪಡುತ್ತವೆ (ನೋಡಿರಿ ಮತ್ತಾಯ 15:19; 19:9 [KJV]; ಮಾರ್ಕ 7:21; ಇಬ್ರಿಯ 13:4).

"ಲೈಂಗಿಕ ಅನೈತಿಕತೆಯು" ಪದದ ವಿಶಾಲಾರ್ಥವನ್ನು ಒತ್ತಿ ಹೇಳುವ *porneia* ಎಂಬಂತೆ NIV ಭಾಷಾಂತರಿಸಿದೆ. ಇದು ದೇವರಿಂದ ನಿಷೇಧಿಸಲ್ಪಟ್ಟ ನೈತಿಕ ಕಾರ್ಯಗಳನ್ನು, ಅದು ಒಬ್ಬರಿಗೊಬ್ಬರು ಪರಸ್ಪರ ಮದುವೆಯಾಗದ ಪುರುಷ ಮತ್ತು ಸ್ತ್ರೀಯ ಮಧ್ಯದ, ಮನುಷ್ಯ ಮತ್ತು ಮೃಗದ ಮಧ್ಯದ (ವಿಮೋಚನಕಾಂಡ 22:19), ಪುರುಷ ಮತ್ತು ಪುರುಷನ ಮಧ್ಯದ, ಅಥವಾ ಸ್ತ್ರೀ ಮತ್ತು ಸ್ತ್ರೀಯ ಮಧ್ಯದ ಲೈಂಗಿಕತೆಯಾಗಿರುವ ಇವುಗಳನ್ನು ಒಳಗೊಂಡಿದೆ (ರೋಮಾಪುರ 1:26, 27).

ಎರಡನೆಯದಾಗಿ, ಪೌಲನು ಎಲ್ಲಾ **ವಿಧವಾದ ಬಂಡುತನವನ್ನೂ** ಕೂಡಾ ನಿಷೇಧಿಸಿದ್ದಾನೆ. ಇಲ್ಲಿ ಬಳಸಲಾದ ಗ್ರೀಕ್ ನಾಮಪದವು *akatharsia* ಆಗಿದ್ದು ಅದರ ಅರ್ಥವು ನೈತಿಕವಾಗಿ "ಯೋಚಿಸುವಲ್ಲಿ ಮತ್ತು ಜೀವಿತದಲ್ಲಿ ಮಲೀನವಾಗಿರುವದು" ಎಂದಾಗಿದೆ.[5] *Akatharsia* ಇದು ಈ ವೇದಭಾಗದಲ್ಲಿ ಮತ್ತು ಇನ್ನಿತರ ಆಧಾರಗಳಲ್ಲಿರುವಂತೆ ಲೈಂಗಿಕ ಪಾಪದೊಡನೆ ಸಹಯೋಗವನ್ನು ಹೊಂದಿದೆ (ನೋಡಿರಿ 2 ಕೊರಿಂಥ 12:21; ಗಲಾತ್ಯ 5:19; ಕೊಲಸ್ಸೆ 3:5; 1 ಥೆಸಲೋನಿಕ 4:3, 7). ಎಫೆಸದವರು ಲೈಂಗಿಕ ಪಾಪದ ಕೃತ್ಯದಿಂದ ದೂರವಾಗಿರಬೇಕೆಂದು ಮಾತ್ರ ಪೌಲನು ಬಯಸಲಿಲ್ಲ ಆದರೆ ಅದನ್ನು ಯೋಚಿಸಲು ಬಾರದೆಂದು ಬಯಸುವವನಾಗಿದ್ದಾನೆ.

ಮೂರನೆಯದಾಗಿ, **ದ್ರವ್ಯಾಶೆಯನ್ನು** ಪೌಲನು ಸೂಚಿಸುವವನಾಗಿದ್ದಾನೆ ("ದುರಾಶೆತನ"; KJV). "ದ್ರವ್ಯಾಶೆಯು" (*pleonexia*) "ಹೆಚ್ಚಾಗಿ ಹೊಂದುವ ಅಥವಾ ತಾನು ಯಾವುದನ್ನು ಹೊಂದಿಲ್ಲವೋ ಅದನ್ನು ಪಡೆಯುವ ಆಸೆ" ಆಗಿರುತ್ತದೆ.[6] ಈ ಪದವು "ಅನೈತಿಕತೆ" ಮತ್ತು "ಅಪವಿತ್ರತೆ" ("ಅಶುದ್ಧತೆ"; KJV) ಗಿಂತ ಹೆಚ್ಚಾಗಿ ಸಮಸ್ಯೆಯು ಬೆಳೆಯುವದನ್ನು ಈ ಪದವು ಗುರುತಿಸುವುದಾಗಿದೆ. "ದುರಾಶೆಯು" ವಸ್ತುರೂಪದ ಆಸ್ತಿಯನ್ನು ಪಡೆಯುವ ಇಚ್ಛೆಯನ್ನು ಸೂಚಿಸಬಹುದಾದರೆ, ಈ ಸಂಧರ್ಭದಲ್ಲಿ ಇದು ಲೈಂಗಿಕ ಪ್ರವೃತ್ತಿಗಾಗಿನ ದುರಾಶೆಯನ್ನೂ ಹೊಂದಿರುವದನ್ನೂ ಸಹ ಇದು ಸೂಚಿಸಬಹುದಾಗಿದೆ. ಹೊಸ ಒಡಂಬಡಿಕೆಯ ಇತರ ವೇದ ಭಾಗದಲ್ಲಿ *pleonexia*ವು *porneia* ಜೊತೆಗೆ ಬಳಸಲ್ಪಟ್ಟಿದ್ದು, ಆ ದುರಾಶೆಯು ದ್ರವ್ಯಾಸ್ಥಿಗಿಂತ ಹೆಚ್ಚಾದದ್ದನ್ನು ಪಡೆಯುವ ಇಚ್ಛೆಯೆಂದು ಸೂಚಿಸಲ್ಪಟ್ಟಿದೆ (ನೋಡಿರಿ 1 ಕೊರಿಂಥ 6:9, 10; ಕೊಲಸ್ಸೆ 3:5).

**ಇವುಗಳ ಸುದ್ದಿಯಾದರೂ ನಿಮ್ಮಲ್ಲಿ ಇರಬಾರದು** ಎಂಬುದು "ಆ ಜನರು ರಹಸ್ಯವಾಗಿ ನಡೆಸುವ ಕೆಲಸಗಳನ್ನು ಕುರಿತು ಮಾತನಾಡುವದಾದರೂ ನಾಚಿಕೆಗೆ ಕಾರಣವಾಗಿದೆ" ಎಂದು ವಚನ 12ರಲ್ಲಿ ಅಪೊಸ್ತಲನು ಬರೆದಂಥದ್ದನ್ನು ಮುಂತಿಳಿಸುವಂತದ್ದಾಗಿದೆ: ವಚನ 3ರಲ್ಲಿನ ನಿಷೇಧವು ಗ್ರೀಕ್ ನಕರಾತ್ಮಕ *mēde*ದಿಂದ ಬಲಪಡಿಸುವ ಮತ್ತು ಸ್ಪಷ್ಟಪಡಿಸುವ ಮೂಲಕ ಗುರುತಿಸಲ್ಪಟ್ಟದ್ದಾಗಿದೆ. ಪೌಲನ ತಾರ್ಕಿಕತೆಯು ಈ ಪಾಪಗಳನ್ನು ಚರ್ಚಿಸುವದೂ ಕೂಡಾ "ಅವರು ತಾಳಿಕೊಂಡಂಥ ಮತ್ತು ಅಪರೋಕ್ಷವಾಗಿ ತಮ್ಮ ಅಭ್ಯಾಸಕ್ಕೆ ಒತ್ತಾಸೆಯನ್ನು

ಕೊಡುವಂಥ ವಾತಾವರಣವನ್ನು ಸೃಷ್ಟಿವುದಾಗಿದೆ" ಎಂದಾಗಿರಬಹುದು.[7]

**ದೇವಜನರಿಗೆ ಯೋಗ್ಯವಾದದ್ದು** ಎಂಬುದು ಲೈಂಗಿಕ ಪಾಪಗಳನ್ನು ಅಲಕ್ಷಿಸುವ ಪ್ರೇರಣೆಯನ್ನು ಒದಗಿಸುವುದಾಗಿದೆ. ಪರಿಶುದ್ಧ ಜನರು ಇಹಲೋಕದ ಜನರು ಮಾಡುವುದಕ್ಕಿಂತಲೂ ಭಿನ್ನವಾದ ರೀತಿಯ ಮೂಲಕ ಜೀವಿಸುತ್ತಿದ್ದಾರೆ. ದೇವರು ಮತ್ತು ಕ್ರಿಸ್ತನನ್ನು ಅನುಸರಿಸುವವರಾದಂಥ ನಾವು ಪರಿಶುದ್ಧರೂ ಮತ್ತು ದೋಷರಹಿತರೂ ಆಗಿರಬೇಕು (1:4). "ಯೋಗ್ಯ" (*prepō*) ಎಂಬುದು ಕ್ರೈಸ್ತರ ಪವಿತ್ರ ಜೀವಿತದೊಡನೆ ಸಂಬಂಧಿಸಿರುವುದಾಗಿದೆ (ತೀತ ಪತ್ರಿಕೆಯಲ್ಲಿ ಈ ಪದಕ್ಕಾಗಿ ಪೌಲನು ಬಳಸಿದ ರೀತಿಯನ್ನು ನೋಡಿರಿ 2:1) ಥೆಸಲೋನಿಕ 4:3-7 ಮತ್ತು 1 ತಿಮೋಥೆ 2:10ರಲ್ಲಿ ಪೌಲನು ಕ್ರೈಸ್ತರ ಪರಿಶುದ್ಧ ಜೀವಿತದೊಡನೆ ಲೈಂಗಿಕ ಅನೈತಿಕತೆಯನ್ನು ವ್ಯತ್ಯಾಸಮಾಡಿದ್ದಾನೆ.

**ವಚನ 4. ಹೊಲಸು ಮಾತು** *aischrotēs*ರ ಭಾಷಾಂತರವಾಗಿದ್ದು, "ನಾಚಿಕೆಗೇಡಿತನ, ಸಾಮಾನ್ಯವಾಗಿ ಇರುವ ಅನೈತಿಕತೆ" ಎಂಬರ್ಥವನ್ನು ಕೊಡುವುದಾಗಿದೆ;[8] ಆದರೆ ಇದು **ಹುಚ್ಚು ಮಾತು ಕುಚೋದ್ಯ ಮಾತುಗಳೊಡನೆ** ಬಳಸಲ್ಪಡುತ್ತಿರುವದರಿಂದ, ನಿರ್ಧಿಷ್ಟವಾಗಿ ಅಸಭ್ಯವಾದ ಮಾತುಗಳನ್ನು ಇದು ಸೂಚಿಸುವಂಥದ್ದೇ ಆಗಿದೆ. (ನೋಡಿರಿ ಕೊಲಸ್ಸೆ 3:8, *aischrologia*ದ ಅರ್ಥವು "ಅವಮಾನಕರವಾದ ಮಾತು" ಅಥವಾ "ಹೊಲಸು ಭಾಷೆ" ಎಂದು ಪೌಲನು ಬಳಸಿದ್ದಕ್ಕೆ ಅರ್ಥವು ಆಗಿದೆ [NIV].) "ಹುಚ್ಚುಮಾತು" ಇದು ಲೈಂಗಿಕ ಪಾಪಕ್ಕೆ ಸಂಬಂಧಿಸಿದಂತೆ ಹುಚ್ಚುತನದ ಮಾತುಗಳನ್ನು ಸೂಚಿಸುವಂಥ ಸಂಯುಕ್ತಪದವಾಗಿದ್ದು *mōrologia*ದ ಭಾಷಾಂತರವಾಗಿದ್ದು *mōros* ("ಹುಚ್ಚ") ಮತ್ತು *logos* ("ಮಾತು"),[9] ಇದರಿಂದ ಮಾಡಲ್ಪಟ್ಟಿದೆ. "ಕುಚೋದ್ಯ ಮಾತುಗಳನ್ನು" ನಿಷೇಧಿಸುವುದರ ಪೌಲನು ಜೋಡಿಸುವಿಕೆಯು *eutrapelia*ದ ಭಾಷಾಂತರವಾಗಿದ್ದು, ಈ ವೇದಭಾಗದಲ್ಲಿ ಇದರ ಅರ್ಥವು ಲೈಂಗಿಕ ಕೃತ್ಯಗಳ ಬಗೆಗಿನ "ಅಸಭ್ಯವಾದ ಮಾತು" ಎಂಬಂರ್ಥವನ್ನು ಕೊಡುತ್ತದೆ. ಎಫೆಸದವರು ಲೈಂಗಿಕ ಪಾಪದ ಹಾಸ್ಯವನ್ನು ಮಾಡುವದನ್ನೂ ಕೂಡಾ ಪೌಲನು ಬಯಸುತ್ತಿಲ್ಲ. ಈ ಪಾಪಗಳ ಬಗೆಗಿನ ಅಂಥ ಒಂದು ಭಾವನೆಯ ವ್ಯಕ್ತಪಡಿಸುವದು ಅವುಗಳನ್ನು ತಾಳಿಕೊಳ್ಳುವದು ಅಥವಾ ಅದರಲ್ಲಿ ಒಳಗೊಳ್ಳುವ ವಾತಾವರಣವನ್ನು ಸೃಷ್ಟಿಮಾಡುವುದಾಗಿದೆ. ಈ ಬಾಯಿ ಮಾತಿನ ಈ ಪಾಪಗಳು **ಅಯುಕ್ತವಾಗಿವೆ**, ಅಥವಾ ದೇವಜನರಿಗೆ ಅಯೋಗ್ಯವಾದವುಗಳು ಆಗಿವೆ ಎಂದು ಪೌಲನು ಹೇಳುತ್ತಾನೆ.

ದೇವಜನರಿಗೆ ಯೋಗ್ಯವಾದದ್ದು ಯಾವುದೆಂದರೆ **ಉಪಕಾರಸ್ತುತಿ ಮಾಡುವದು.** ಉಪಕಾರಸ್ತುತಿ ಮಾಡುವದು ದೇವರು ಉದಾರವಾಗಿ ಕೊಡುವವನು ಎಂದು ಗುರುತಿಸುವದು ಮತ್ತು ನಾವು ಆತನ ಸನ್ನಿಧಿಯಲ್ಲಿ ಜೀವಿಸುವಂಥವರು ಹಾಗೂ ಆತನ ದೇವರಜನರು ಎಂಗು ಎಣಿಸಲ್ಪಡುವರು ಎಂದು ದೇವರನ್ನು ಗುರುತಿಸುವದೂ ಆಗಿದೆ. ಉಪಕಾರಸ್ತುತಿಯು ಅದರಲ್ಲಿ ಜೀವಿಸುವುದಕ್ಕೂ ಅಥವಾ ಪಾಪದ ಬಗ್ಗೆ ಹಾಸ್ಯಮಾಡುವುದರ ಬಗ್ಗೆ ಪರಿಹಾರವಾಗಿದೆ. ಪಾಪದಲ್ಲಿ ಜೀವಿಸುವಂಥವರು ದೇವರ ಬಗ್ಗೆ ಮತ್ತು ಇತರ ಸಂಗತಿಗಳಲ್ಲಿ ಯೋಚನೆ ಮಾಡಲಾರರು ಅವರು ಕೃತಜ್ಞರಾಗಿರುತ್ತಾರೆ.

**ವಚನ 5.** ಮುಂದಿನ ಪ್ರೇರಣೆಯಂತೆ, **ಜಾರರು ದುರಾಚಾರಿಗಳು ವಿಗ್ರಹಾರಾ ಧಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ** ಎಂದು ಪಟ್ಟಿಮಾಡಲ್ಪಟ್ಟಂಥ ದುರ್ಗಣಗಳಲ್ಲಿ ಪಾಲ್ಗೊಂಡವರಿಗೆಲ್ಲಾ ಪೌಲನು ಕಠಿಣವಾದ ಎಚ್ಚರಿಕೆಯನ್ನು ಮಂಡಿಸುವವನಾಗಿದ್ದಾನೆ. ಇಲ್ಲಿ, ಆತನು ಲೋಭದಲ್ಲಿ ಪಾಲ್ಗೊಂಡಿರುವವರೆಲ್ಲರೂ ವಿಗ್ರಹರಾಧಕರಂತಿದ್ದಾರೆ ಎಂಬ ವಿಚಾರವನ್ನು ಆತನು ಜೋಡಿಸುತ್ತಾನೆ. ಲೈಂಗಿಕ ಪಾಪಕ್ಕೋಸ್ಕರ ದುರಾಶೆಯಾಗಿರುವದು ಪಾಪವು ಕಾರ್ಯರೂಪಗೊಳ್ಳುತ್ತಿದೆಯೋ ಅಥವಾ ತಂತಾನೆ ನಡೆಯುತ್ತಿದೆಯೋ ಆ ವ್ಯಕ್ತಿಗೋಸ್ಕರ ಇರುವುದಾದರೆ ಅದು ವಿಗ್ರಹಾರಾಧನೆಯು ಆಗಿದೆ. ಯಾವುದನ್ನೆ ಆಗಲಿ ಒಂದು ವಿಗ್ರಹವನ್ನು

ಅದನ್ನು ತಂದು ದೇವರ ಮುಂದಾಗಿಯೇ ಇಡುವದು ಆಗಿದೆ ಮತ್ತು ಈ ವೇದಭಾಗದಲ್ಲಿ ವಿಗ್ರಹವು ಲೈಂಗಿಕ ಪಾಪವಾಗಿದೆ. ಈ ರೀತಿ ಯಲ್ಲಿ ವಿಗ್ರಹಾರಾಧಕರಂತಿರುವವರು "ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯಸ್ಥತೆಯನ್ನು" ಹೊಂದುವುದೇ ಇಲ್ಲ (1:14, 18), ಮತ್ತು ದೇವಜನರಿಗಾಗಿನ ಈ ಎಚ್ಚರಿಕೆಯು ನಮ್ಮ ಬಾಧ್ಯತೆಯನ್ನು ನಿರಾಕರಿಸುವ ಯಾವುದೇ ಅಭ್ಯಾಸವನ್ನು ಅಲಕ್ಷ್ಯಮಾಡಬೇಕು. ದೇವರ ರಾಜ್ಯದಿಂದ ಸಾಧ್ಯವಿರುವ ನಿರಾಕರಣೆಯು ಕ್ರೈಸ್ತತೆಯ ಪವಿತ್ರ ಜೀವಿತದಲ್ಲಿ ಜೀವಿಸಲು ಪ್ರೇರೇಪಿಸಲು 1 ಕೊರಿಂಥ 6:9 ಮತ್ತು ಗಲಾತ್ಯ 5:21 ಬೇರೆ ಕಡೆಯಲ್ಲಿ ಸೂಚಿತವಾಗಿದೆ. ಪೌಲನು ವರ್ಣಿಸಿದಂಥ ಪಾಪಗಳಲ್ಲಿ ಜೀವಿಸುವಂಥವರು ದೇವರ ಮತ್ತು ಕ್ರಿಸ್ತನ ಆಳ್ವಿಕೆಯ ಹೊರಗೆ ಜೀವಿಸುವವಂಥವರು ದೇವರ ರಾಜ್ಯದ ಮತ್ತು ನಿತ್ಯತ್ವದ ರಾಜ್ಯದಲ್ಲಿ ಯಾವುದೇ ರೀತಿಯ ಬಾಧ್ಯತೆಯನ್ನು ಕಳಕೊಳ್ಳುವವರೂ ಆಗಿರುತ್ತಾರೆ.

**ವಚನ 6.** ಆತನ ಎಚ್ಚರಿಕೆಯನ್ನು ಅನುಸರಿಸುತ್ತಾ, **ಹುರುಳಿಲ್ಲದ ಮಾತುಗಳನ್ನಾಡುವವರಿಗೆ ಕಿವಿಗೊಟ್ಟು ಮೋಸಹೋಗಬೇಡಿರಿ; ಅಂಥ ಕೃತ್ಯಗಳ ನಿಮಿತ್ತದಿಂದ ದೇವರ ಕೋಪವು ಆತನಿಗೆ ಅವಿಧೇಯರಾಗಿರುವವರ ಮೇಲೆ ಬರುತ್ತದೆ** ಎಂದು ಪೌಲನು ಹೇಳುತ್ತಾನೆ. ಅನೈತಿಕ ಆಚಾರಗಳು ತಾಳಿಕೊಳ್ಳಬೇಕು ಅಥವಾ ಸಹಿಸಿಕೊಳ್ಳಬೇಕು ಎಂದು ಅದರ ಬಗ್ಗೆ ಯೋಚಿಸಿ ಯಾರನ್ನಾದರೂ ವಂಚಿಸಲು ಸಹ ಎಫೆಸದವರು ಅವಕಾಶಕೊಡಬಾರದಿತ್ತು. ಅಂಥ ಕೈಚಳಕವು "ಅವಿಧೇಯರಾಗಿ" ದೇವರ ಕೋಪವನ್ನು ತಮ್ಮ ಮೇಲೆ ಬರುವುದನ್ನು ಅಲಕ್ಷಮಾಡುವವರ ಹೃದಯದಿಂದ ಬರುವ ನಿಷ್ಪ್ರಯೋಜಕವಾದ ಮಾತುಗಳಿಂದ ಬಂದವು ಆಗಿವೆ. ಹಲವು ಬಾರಿ ಈ ವೇದಭಾಗದಲ್ಲಿ, ಒಬ್ಬ ವ್ಯಕ್ತಿಯು "ಮಗನು" ಅಥವಾ "ಮಗು" ಎಂಬ ಲಕ್ಷಣದ ಸ್ಪಷ್ಟವಾದ ಗುಣವನ್ನು ಹೊಂದಿರುತ್ತಾನೆ (ಮಾರ್ಕ 3:17; ಅಪೊಸ್ತಲರ ಕೃತ್ಯಗಳು 4:36). ಎಫೆಸದವರ ಕ್ರೈಸ್ತರಾಗುವುದಕ್ಕಿಂತ ಮುಂಚೆ "ಕೋಪದಡಿಯಲ್ಲಿದ್ದರು" ಯಾಕೆಂದರೆ ಅವರು ದೇವರ ಕೋಪವನ್ನು ಪಡೆಯುವಂಥ ಗುಣಗಳನ್ನು ಹೊಂದಿದ ಭಾಗ ವಾಗಿದ್ದಕ್ಕೆ ಅವರು ಹೊಂದಿಕೊಂಡಿದ್ದರು ಎಂದು 2:3ರಲ್ಲಿ ಪೌಲನು ಸೂಚಿಸಿದ್ದಾನೆ. ವಚನ 6ರಲ್ಲಿ "ಅವಿಧೇಯರ" ಬಗ್ಗೆ ಮಾತನಾಡಿದ್ದಾನೆ. ಅವಿಧೇಯತೆಯ ಗುಣಗಳ ಮೂಲಕ ಲೈಂಗಿಕ ಪಾಪವನ್ನು ಮಾಡುವಂಥವರ ಮೇಲೆ ದೇವರ ಯಾವುದೇ ತೀರ್ಪುಇಲ್ಲ ಎಂದು ಕಲಿಸಲ್ಪಟ್ಟದ್ದನ್ನು ನಂಬುವ ಜನರು ಮೊದಲನೆಯ ಶತಮಾನದಲ್ಲಿ ಇದ್ದರು (ನೋಡಿರಿ ರೋಮಾಪುರ 1:18-32).

ಪ್ರೀತಿಯಲ್ಲಿ ನಡೆಯುವ ಮೂಲಕ ನಾವು ದೇವರನ್ನು ಮತ್ತು ಕ್ರಿಸ್ತನನ್ನು ಅನುಸರಿಸಲೇಬೇಕು ಎಂಬುದಕ್ಕೆ ಪೌಲನು ಯಾಕೆ ಲೈಂಗಿಕ ಪಾಪಗಳ ಚರ್ಚೆಯನ್ನು ಬಳಸಿದನು? ಇದಕ್ಕೆ ಸರಳವಾದ ಉತ್ತರವೆಂದರೆ, ದೇವರು ಮತ್ತು ಕ್ರಿಸ್ತನು ಪ್ರೀತಿಯಲ್ಲಿ ಇರುವುದರಿಂದ ಮತ್ತೊಬ್ಬನು ಒಳ್ಳೆಯತನವನ್ನು ಎದುರುನೋಡಲು - ಆತನಿಗೆ ಸಹಾಯಿಸಲು ಮತ್ತು ಆತನಿಗೆ ಅಪಾಯವನ್ನು ವಾಗದಿರುವಂತೆ, ಆತನನ್ನು ಮೇಲಕ್ಕೆ ಎತ್ತಲು ಮತ್ತು ಆತನು ನಾಶವಾಗದಂತ ಪ್ರೀತಿಸುವದೇ ಆಗಿದೆ. ಲೈಂಗಿಕ ಪಾಪಗಳು ವಿರುದ್ಧ ಪರಿಣಾಮಗಳನ್ನು ಹೊಂದಿವೆ; ಅವುಗಳ ಸತ್ಯವೇದಿಯ ಪ್ರೀತಿಯನ್ನು ಪ್ರಾಯೋಗಿಸಲಾರವು, ಆದರೆ ವೈಯಕ್ತಿಕ ಸಂತೃಪ್ತಿಗಾಗಿ ಅವುಗಳನ್ನು ಬಳಸುವ ಮೂಲಕ ಜನರಿಗಾಗಿ ಅದು ನಿರ್ಲಕ್ಷವನ್ನು ತೋರುವುದಾಗಿದೆ. ದೇವರು ಲೈಂಗಿಕತೆಯನ್ನು ಸೃಷ್ಟಿಸಿದ್ದಾನೆ ಮತ್ತು ದೇವರ ಯೋಜನೆಯಂತೆ ಸಂದರ್ಭದಡಿಯಲ್ಲಿಯೇ ಬಳಸಲ್ಪಟ್ಟರೆ ಅದು ಸುಂದರವಾದದ್ದು ಆಗಿರುತ್ತದೆ. ದೇವರ ಉದ್ದೇಶವು ಲೈಂಗಿಕತೆಗಾಗಿ ಇರುವುದಾಗಿದ್ದು ಒಬ್ಬ ಸ್ತ್ರೀ ಮತ್ತು ಪುರುಷನ ಮಧ್ಯ ಮದುವೆ ಯಲ್ಲಿ, ಪ್ರೀತಿಯಲ್ಲಿ, ಮತ್ತು ಜೀವನವಿಡಿ ಒಡಂಬಡಿಕೆಯಲ್ಲಿ ಇರುವುದಾಗಿದೆ. ಒಬ್ಬ ಸ್ತ್ರೀ ಮತ್ತು ಪುರುಷ ಮದುವೆಯ ಹೊರಗೆ ಲೈಂಗಿಕ ತೃಪ್ತಿ ಪಡಿಸುವಿಕೆಯನ್ನು ಎದುರುನೋಡುವದು ಮದುವೆಯ ಯಾವುದೇ ಒಡಂಬಡಿಕೆಯಿಲ್ಲದ ಮತ್ತು ಜವಾಬ್ದಾರಿಯಿಲ್ಲದ ಮದುವೆಯಾಗಿದೆ.

ಮದುವೆಯ ಹೊರಗೆ ಲೈಂಗಿಕತೆಯಲ್ಲಿ ತೊಡಗುವದು ಜನರನ್ನು ಬಳಸುವದು ಮತ್ತು ಅವರನ್ನು ಪ್ರೀತಿಸದೇ ಇರುವದೂ ಆಗಿದೆ. ಈ ಲೈಂಗಿಕತೆಯು ಒಪ್ಪಿಗೆಯುತವಾಗಿದ್ದರೂ ಕೂಡಾ, ಯಾವುದೇ ಒಡಂಬಡಿಕೆಯಿಲ್ಲದೆ ವೈಯಕ್ತಿಕ ತೃಪ್ತಿಗಾಗಿ ಇತರರನ್ನು ಬಳಸಿಕೊಳ್ಳುವದು ಈ ರೀತಿಯ ಸಂಬಂಧದಲ್ಲಿ ಸೇರಿರುವುದಾಗಿದೆ. ಲೈಂಗಿಕ ಪಾಪವು ಒಬ್ಬರನ್ನು ಅತಿಯಾಗಿ ಪ್ರೀತಿಯ ವಿಷಯವಲ್ಲ ಅದು ಅನೈತಿಕತೆಯನ್ನು ತಡೆಗಟ್ಟಲಾರದು. ಬದಲಾಗಿ, ಇದು ಪ್ರೀತಿ ಸುವ ಜವಾಬ್ದಾರಿಯನ್ನು ಒಪ್ಪಿಕೊಳ್ಳುವ ವಿಷವೂ ಸಹ ಆಗಿದೆ. ಒಬ್ಬ ವ್ಯಕ್ತಿಯು ಮದುವೆಯ ಜವಾ ಬ್ದಾರಿಗೆ ಬದ್ಧನಾಗಿಲ್ಲವಾದರೆ, ಆಗ ದೇವರು ಮದುವೆಗಾಗಿ ಒದಗಿಸಿದ ಅವಕಾಶಗಳನ್ನು ಅನುಭವಿಸಲು ಆ ವ್ಯಕ್ತಿಗೆ ಯಾವುದೇ ಹಕ್ಕು ಇಲ್ಲ. ಮದುವೆಯ ಹೊರಗಿನ ಲೈಂಗಿಕತೆಯು ತಪ್ಪು ಯಾಕೆಂದರೆ ಹೀಗೆಂದು ದೇವರು ಹೇಳಿದ್ದಾನೆ (ಇಬ್ರಿಯ 13:4). ಆದರೆ ಇದು ಸಹ ತಪ್ಪು ಯಾಕೆಂದರೆ ಜನರು ಪ್ರೀತಿಸಲ್ಪಡಬೇಕು ಹೊರತು ಉಪಯೋಗಿಸಲ್ಪಡಬಾರದು.

## ಅನ್ವಯ

**ಪ್ರೀತಿಯಲ್ಲಿ ನಡೆಯುವದು (5:1-6)**

5:1-6ರಲ್ಲಿ, ಪೌಲನು ಮಹಿಮಾಯುತ ಸಭೆಯ ಸದಸ್ಯರಾದಂಥ ಕ್ರೈಸ್ತರು “ನಡೆ”ಯ ಬಹುದಾದ ನಾಲ್ಕು ಮಾರ್ಗಗಳಲ್ಲಿ ಎರಡನೆಯದನ್ನು ಚರ್ಚಿಸಿದ್ದಾನೆ. ಪತ್ರದ ಈ ಭಾಗದಲ್ಲಿ, ನಾವೂ ಸಹ “ಪ್ರೀತಿಯಲ್ಲಿ ನಡೆಯಬೇಕು” ಎಂದು ಹೇಳಿದ್ದಾನೆ.

*“ದೇವರನ್ನು ಅನುಸರಿಸುವವರು.”* ನಾವು “ಪ್ರೀತಿಯಲ್ಲಿ ನಡೆದಾಗ” “ದೇವರನ್ನು ಅನುಸರಿಸುವವರು” ಆಗುತ್ತೇವೆ ಮತ್ತು ಕ್ರಿಸ್ತನನ್ನು ಹಿಂಬಾಲಿಸುತ್ತೇವೆ. ಪ್ರೀತಿಯ ಪ್ರೇರಣೆಯಿಂದ ಸುರಿದ ಪಾಪಿಗಳಿಗಾಗಿ ದೇವರು ಮಾಡಿದ ಪ್ರತಿಯೊಂದನ್ನೂ ಪೌಲನು ಹಿಂದಿನಿಂದಲೂ ತೋರಿಸಿದ್ದಾನೆ (ನೋಡಿರಿ 2:1-10). ದೇವರ ಮಕ್ಕಳಾದಂಥ, ನಾವು ಆತನು ಪ್ರೀತಿಮಾಡಿದಂತೆ ಪ್ರೀತಿಸುವ ಮೂಲಕ ಕುಟುಂಬದ ರೀತಿಯಂತೆ ನಮ್ಮ ಮೇಲೆ ತೆಗೆದುಕೊಳ್ಳುವಾ (5:1).

ನಮಗೋಸ್ಕರ ಕ್ರಿಸ್ತನು ತಾನೇ ಕೊಡುಗೆಯಾದದ್ದು ಪಾಪಕ್ಕಾಗಿನ ಒಂದು ಯೋಗ್ಯವಾದ ಯಜ್ಞವಾಗಿದೆ, ದೇವರಿಂದ ಒಪ್ಪಿತವಾದ ಯಜ್ಞವಾಗಿದೆ, ಆತನು ನಮ್ಮನ್ನು ಪ್ರೀತಿಮಾಡಿದ ಕಾರಣ ಇದು ಮಾಡಲ್ಪಟ್ಟಿತು. ಕ್ರಿಸ್ತನು ನಾವು ಜೀವಿಸುವುದಕ್ಕೆ ಮಾದರಿಯಾಗಿದ್ದಾನೆ (ನೋಡಿರಿ ರೋಮಾಪುರ 8:29; 1 ಪೇತ್ರ 2:21), ಮತ್ತು ಇತರರನ್ನು ಪ್ರೀತಿಸುವ ಮೂಲಕ ನಾವು ಕ್ರಿಸ್ತನನ್ನು ಅನುಸರಿಸಬೇಕು (5:2).

*“ದೇವಜನರು ಅಥವಾ ಪಾಪಿಗಳು.”* ನಾವು “ಪ್ರೀತಿಯಲ್ಲಿ ನಡೆಯುವದು” “ದೇವ ಜನರು” (5:3) ಮತ್ತು “ಅವಿಧೇಯರ” (5:6) ಮಧ್ಯದ ಜೀವನ ಶೈಲಿಗೆ ವ್ಯತ್ಯಾಸವಾದ ರೀತಿಯಲ್ಲಿ ಜೀವಿಸಬೇಕು. “ದೇವರಿಗೆ ಅವಿಧೇಯ”ರದವರ ಜೀವಿತದಲ್ಲಿ ಸ್ವಾಭಾವಿಕವಾದ ಪ್ರೀತಿಯ ಕೊರತೆಯು ಇರುವದನ್ನು ದೃಷ್ಟಾಂತಿಕರಿಸಲು ಪೌಲನು ಲೈಂಗಿಕ ಪಾಪದ ಉದಾಹರಣೆಯನ್ನು ಬಳಸಿದ್ದಾನೆ (5:3-5).

“ದೇವಜನರು” ಇತರರಿಗೆ ಪ್ರೀತಿಯನ್ನು ಹೊಂದಿರುವದಕ್ಕೆ ಲಕ್ಷಿಕರಿಸಲ್ಪಟ್ಟಿದ್ದಾರೆ. ವ್ಯಕ್ತಿಯಾಗಿ ನಾವು ಅವರನ್ನು ಗೌರವಿಸಬೇಕು ಮತ್ತು ಅವರಿಂದ ಒಳ್ಳೆಯದನ್ನು ಎದುರುನೋಡ ಬೇಕು. ಯಾರು ಲೈಂಗಿಕ ಪಾಪವನ್ನು ಮಾಡುತ್ತಾರೋ ಅವರು ಪ್ರೀತಿಸುವವರಲ್ಲ; ಅವರು ತಮ್ಮ ಸಂತೋಷಕ್ಕಾಗಿ ಜನರನ್ನು ಬಳಸಿಕೊಳ್ಳುವವರು ಆಗಿದ್ದಾರೆ.

“ಪ್ರೀತಿಯಲ್ಲಿ ನಡೆಯುವದು” ತಮ್ಮನ್ನು ದೇವ ಜನರ ಹಾಗೆ ಅವರ ರೀತಿಯಲ್ಲಿ “ಹೊಂದಿಸಿಕೊಳ್ಳುವದು” ಆಗಿದೆ. ನಾವು “ಪ್ರೀತಿಯಲ್ಲಿ ನಡೆಯುವದರ” ಮೂಲಕ “ಉಪಕಾರ ಹೇಳುವವರೂ” (5:3, 4) ಮತ್ತು ವಂಚಕ ಜೀವನ ಶೈಲಿಯ ದೇವರ ಚಿತ್ತಕ್ಕೆ

ಅಸಮ್ಮತವಾದುದರ ವಿರುದ್ಧ ಕಾದುಕೊಳ್ಳುವದೂ ಆಗಿದೆ (5:6).

ಕ್ರೈಸ್ತನ ನಡವಳಿಕೆಯು ದೇವರ ಮತ್ತು ಕ್ರಿಸ್ತನ ಪ್ರೀತಿಯ ಮೇಲಿನ ನಮೂನೆಯಾಗಿದೆ. ಈ ಜೀವನಶೈಲಿಯು, ಹಿಂದೆ ನಾವು ಜೀವಿಸದ ಮತ್ತು ಜಗತ್ತು ಇನ್ನೂ ಜೀವಿಸುತ್ತಿರುವ ರೀತಿಯಿಂದ ಮೇಲಕ್ಕೆ ಎತ್ತುತ್ತದೆ.

Jay Lockhart

---

ಟಿಪ್ಪಣಿಗಳು

[1]S. D. F. Salmond, "The Epistle to the Ephesians," in *The Expositor's Greek Testament*, ed. W. Robertson Nicoll (Grand Rapids, Mich.: Wm. B. Eerdmans Publishing Co., 1967), 3:350. [2]Ibid. [3]Andrew T. Lincoln, *Ephesians*, Word Biblical Commentary, vol. 42 (Dallas: Word Books, 1990), 312. [4]Ibid., 321. [5]C. G. Wilke and Wilibald Grimm, *A Greek-English Lexicon of the New Testament*, trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 21; see also Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 34. [6]Spiros Zodhiates, ed., *The Complete Word Study New Testament*, 2d ed. (Chattanooga, Tenn.: AMG Publishers, 1991), 948. [7]Lincoln, 322. [8]Salmond, 352. [9]Zodhiates, 938. [10]Ibid., 918.